ಓ.ಎಸ್. ನಂ. 180/2014

ಪಿ.ಡಬ್ಲ್ಯೂ: 02 (ಕೊಟ್ರಗೌಡ)

ದಿನಾಂಕಃ 05.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ – ಶ್ರೀ ಬಿ ಎನ್ ಆರ್ ವಕೀಲರಿಂದ.

ನಾನು ವಾದಿಯ ಪರವಾಗಿ ಸಾಕ್ಷಿ ನುಡಿಯಲು ಬಂದಿರುತ್ತೇನೆ. ನನ್ನನ್ನು ಅವರೇ ಕರೆದುಕೊಂಡು ಬಂದಿರುತ್ತಾರೆ. ಸಾಕ್ಷಿ ಮುಂದುವರೆದು ನನ್ನ ತಂದೆ ಸಹಿ ಹಾಕಿದ ಕಾರಣ ಬಂದಿರುತ್ತೇನೆ. ಗುರುಸಿದ್ದಮ್ಮ ಅವರು ನನಗೆ ಗೊತ್ತು. ಅವರ ಕುಟುಂಬದ ಬಗ್ಗೆ ಸಹ ನನಗೆ ಗೊತ್ತು. ಗುರುಸಿದ್ದಮ್ಮಳ ತಂದೆಯ ಹೆಸರು ಭರಮಪ್ಪ. ಭರಮಪ್ಪನಿಗೆ ಒಬ್ಬಳೇ ಮಗಳು ಇರುತ್ತಾಳೆ.

ಸಿದ್ದಲಿಂಗಪ್ಪ ಎಂಬ ಮಗ ಭರಮಪ್ಪನಿಗೆ ಇದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ಭರಮಪ್ಪ ನಮ್ಮ ಗ್ರಾಮದವರು. ಕೆಂಚನಗೌಡರು ಈ ದಾವೆಯನ್ನು ಹೂಡಿರುತ್ತಾರೆ. ಆದರೆ ಯಾರ ವಿರುದ್ಧ ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ದಾನಪತ್ರಕ್ಕೆ ಸಹಿ ಹಾಕಿರುವ ಕಾರಣ ಅದರ ಬಗ್ಗೆ ಸಾಕ್ಷಿ ನುಡಿಯಲು ಬಂದಿರುತ್ತೇನೆ. ನಾನು ಕೆ ಎಸ್ ಆರ್ ಟಿ ಸಿ ಕಂಡಕ್ಟರ್ ಆದ ಕಾರಣ ನನಗೆ ಗ್ರಾಮದ ವಿಚಾರವಾಗಿ ಕೆಲವು ವಿಷಯಗಳು ಗೊತ್ತಿಲ್ಲ. ನಾನು 2000 ನೇ ಇಸವಿಯಲ್ಲಿ ಕೊಟ್ಟೂರಿಗೆ ಬಂದಿರುತ್ತೇನೆ. ಆದರೆ ಗ್ರಾಮದಲ್ಲಿ ನನಗೆ ಜಮೀನು ಇರುವ ಕಾರಣ ನನಗೆ ವಿಚಾರಗಳು ಗೊತ್ತು.

ಭರಮಪ್ಪನ ವೈಯಕ್ತಿಕ ಆದಾಯದ ಬಗ್ಗೆ ನನಗೆ ಮಾಹಿತಿ ಇಲ್ಲ. ಗುರುಸಿದ್ದಮ್ಮಳ ಗಂಡನ ಹೆಸರು ನನಗೆ ಗೊತ್ತಿಲ್ಲ. ಅವರು ಯಾವ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಪ್ರತಿದಿನ ಗುರುಸಿದ್ದಮ್ಮ ಅವರೊಂದಿಗೆ ಸಂಪರ್ಕದಲ್ಲಿ ಇರಲಿಲ್ಲ. ವಾದಿಯ ಕುಟುಂಬಕ್ಕೂ, ಗುರುಸಿದ್ದಮ್ಮಳ ವಂಶಕ್ಕೂ ಯಾವುದಾರೂ ಸಂಬಂಧ ಇದೆಯಾ ಎಂದರೆ ಇಲ್ಲ, ಅವರೆಲ್ಲ ಒಂದೇ ಕುಲಸ್ಥರು. ನಾನು ನನ್ನ ತಂದೆಯೊಂದಿಗೆ ಉಪನೊಂದಣಾಧಿಕಾರಿ ಕಚೇರಿಗೆ ಹೋಗಿರುವುದಿಲ್ಲ. ದಿಃ 13.05.1987 ರಂದು ಉಪನೊಂದಣಾಧಿಕಾರಿ ಕಚೇರಿಗೆ ನನ್ನ ತಂದೆ ಹೋಗಿರುವ ಬಗ್ಗೆ ನನ್ನ ತಂದೆಯವರೇ ನನಗೆ ತಿಳಿಸಿರುತ್ತಾರೆ. ನಾನು ಸಾಕ್ಷಿ ನುಡಿಯುತ್ತಿರುವ ಸ್ವತ್ತಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ನನ್ನ ತಂದೆಯವರು ಸಹ ನನಗೆ ಯಾವ ಸರ್ವೆ ನಂಬರಿಗೆ ಸಂಬಂಧಪಟ್ಟಂತೆ ದಾನಪತ್ರ ಬರೆಯಲಾಯಿತು ಎಂದು ನನಗೆ ಹೇಳಿರುವುದಿಲ್ಲ. ಅದು ಮನೆಗೆ ಸಂಬಂಧಪಟ್ಟಿದ್ದೋ ಅಥವಾ ಜಮೀನಿಗೆ ಸಂಬಂಧಪಟ್ಟಿದ್ದೋ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅದು ಅವರ ಸಹಿ ಎಂದು ಮಾತ್ರ ಗೊತ್ತು. ಆಸ್ತಿಗಳು ಎಲ್ಲಿಂದ ಅವರಿಗೆ ಬಂದಿರುತ್ತವೆ ಎಂಬ ಬಗ್ಗೆ ಸಹ ನನಗೆ ಗೊತ್ತಿಲ್ಲ.

ಓ.ಎಸ್. ನಂ. 180/2014

ಪಿ.ಡಬ್ಲ್ಯು: 02 (ಕೊಟ್ರಗೌಡ)

ದಾವಾ ಸ್ವತ್ತನ್ನು ಯಾವ ರೀತಿಯಲ್ಲಿ ವಾದಿ ಸ್ವಾಧೀನದಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಮತ್ತು ವಾದಿ ಚರ್ಚಿಸಿ ಇಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಸಹಿ ಇರುವ ಕಾರಣ ನಾನು ಸಾಕ್ಷಿ ನುಡಿಯುತ್ತಿದ್ದೇನೆ. ಈ ದಾವೆಯ ಬಗ್ಗೆ ನನಗೆ ವೈಯಕ್ತಿಕವಾಗಿ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ, ನನ್ನ ತಂದೆ ಸಹಿ ಮಾಡಿದ್ದೇನೆ ಎಂದು ಹೇಳಿರುವ ಕಾರಣ ನಾನು ಅವರ ಹೇಳಿಕೆಯ ಮೇರೆಗೆ ಸಾಕ್ಷಿ ನುಡಿಯುತ್ತಿದ್ದೇನೆ. ನನ್ನ ತಂದೆ 13-14 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ದಾವೆಯ ಬಗ್ಗೆ ಅಥವಾ ಪತ್ರದ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಕೆಲವೊಂದು ವಿಚಾರ ಇವೆ, ಕೆಲವೊಂದು ವಿಚಾರ ಇಲ್ಲ. ದಾವೆಯ ಬಗ್ಗೆ ಅಥವಾ ಪತ್ರದ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲದಿದ್ದರು ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.